ದಿ:**11.1.2017** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ವಕೀಲರಿಂದ:-

ಆ ಲೇ ಔಟ್ ಬಗ್ಗೆ ನಾನು ನಿವೇಶನ ಖರೀದಿ ಮಾಡುವ ಕಾಲಕ್ಕೆ ವಿಚಾರಗಳು ನನಗೆ ಗೊತ್ತಿರುತ್ತವೆ. ದಾವಾ ಆಸ್ತಿ ಮೇಲೆ ನಮಗಾಗಲೀ ಅಥವಾ 1ನೇ ಪ್ರತಿವಾದಿಗಾಗಲೀ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಾನು ಕೊಂಡ ನಿವೇಶನ ಸಂಖ್ಯೆ:16/ಎ ಯರಗನಹಳ್ಳಿ ಗ್ರಾಮದ ಯಾವ ಸರ್ವೆ ನಂ.ನಲ್ಲಿ ಬರುತ್ತದೆ ಅಂತ ನನಗೆ ಹೇಳಲು ಆಗುವುದಿಲ್ಲ. ನಾನು ಕೊಂಡೆ ಅಂತ ಹೇಳುವ ನಿವೇಶನ ಯರಗನಹಳ್ಳಿ ಗ್ರಾಮದ ಎಲ್ಲೆಯಲ್ಲಿ ಬರುವುದಿಲ್ಲ ಅನ್ನುವುದು ಸರಿಯಲ್ಲ.

ನಾನು ಸೈಟು ಕೊಂಡ ನಂತರದಿಂದ ಡಾ.ರಾಜಕುಮಾರ್ ರಸ್ತೆಯನ್ನು ನಾನು ನೋಡಿರುತ್ತೇನೆ. ನಾನು ನನ್ನ ಹಾಲಿ ವಿಳಾಸದಲ್ಲಿ 2009 ರಿಂದ ವಾಸಮಾಡಿಕೊಂಡಿರುತ್ತೇನೆ. ನಾನು ಆಗಲೇ ನ್ಯಾಯಾಲಯಕ್ಕೆ ಹಾಜರುಮಾಡಿರುವ ನಿಡಿ-44 ರಿಂದ ನಿಡಿ-47 ಅಲ್ಲದೇ ಆ ಸಂಬಂಧ ಬೇರೆ ದಾಖಲೆಗಳು ಯಾವುದೂ ಇರುವುದಿಲ್ಲ.

ಒಎಸ್ 117/91 , 291/96 ಮತ್ತು 668/03 ರ ಕೇಸುಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಆ 3 ಕೇಸುಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿ ಕೇಸಿನ ಬಗ್ಗೆ ತಿಳಿದುಕೊಂಡಿದ್ದೇನೆ. ಯರಗನಹಳ್ಳಿ ಗ್ರಾಮದ ಎಲ್ಲೆ ಡಾ.ರಾಜಕುಮಾರ್ ರಸ್ತೆಯ ಪೂರ್ವದ ಕಡೆ ಮಾತ್ರ ಇರುತ್ತದೆ ಅನ್ನುವುದು ಸರಿಯಲ್ಲ. ಸದರಿ ರಸ್ತೆಯ ಪಶ್ಚಿಮಕ್ಕೆ ಕ್ಯಾತಮಾರನಹಳ್ಳಿ ಗ್ರಾಮದ ಎಲ್ಲೆ ಮಾತ್ರ ಇರುತ್ತದೆ ಅನ್ನುವುದು ಸರಿಯಲ್ಲ.

ನಾನು ಹೇಳಿದ ನಿವೇಶನ ಸಂಖ್ಯೆ:16/ಎ ಗುರುತಿಸುವ ಸ್ಥಿತಿಯಲ್ಲಿ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಕಾಪೌಂಡ್‌ನ್ನು 2006 ಅಥವಾ 2007 ರಲ್ಲಿ ಹಾಕಿದ್ದೇನೆ ಅಂತ ಹೇಳುತ್ತಾರೆ. ಅಲ್ಲಿ ಅಂದಾಜು 16-17 ಕಾಪೌಂಡ್‌ಗಳು ಇದ್ದಾವೆ. ಆ ಕಾಪೌಂಡ್‌ಗಳನ್ನು ಏಕಕಾಲಕ್ಕೆ ಹಾಕಲಾಗಿದೆ. ಆ ಕಾಲಕ್ಕೆ ವಾದಿಗೆ ಮತ್ತು ಸೊಸೈಟಿಯವರ ಮತ್ತು ನಮ್ಮ ನಡುವೆ ಗಲಾಟೆ ಆಯಿತು ಅನ್ನುವುದು

ಸರಿಯಲ್ಲ. ವಾದಿ ಸಣ್ಣಮ್ಮ ಈ ಕೇಸು ಅಲ್ಲದೇ ಬೇರೆ ಯಾವುದೇ ಕೇಸನ್ನು ಸೊಸೈಟಿಯವರ ಮೇಲೆ ಆಗಲೀ ಅಥವಾ ಇತರರ ಮೇಲೆ ಹಾಕಿಲ್ಲ ಅನ್ನುವ ವಿಚಾರ ನನಗೆ ಗೊತ್ತಿಲ್ಲ.

ಈ ಕೇಸಿನ ಸಣ್ಣಮ್ಮನ ಮೇಲೆ ಬೇರೆಯವರು ಹಾಕಿರುವ ಕೇಸಿನ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಡಾ.ರಾಜಕುಮಾರ್ ರಸ್ತೆಯ ಪಶ್ಚಿಮದ ಕಡೆಗೆ ಬರುವ ಸ್ವತ್ತು ವಾದಿಗೆ ಸೇರಿದ ಸ್ವತ್ತು ಅಂತ ನನಗೆ ಗೊತ್ತಿದ್ದರೂ ಸಹಾ ನಾನು ಸೊಸೈಟಿಯವರೊಂದಿಗೆ ಸೇರಿ ಎಲ್ಲಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾನು ಹೇಳುವ ಸೈಟ್ ನಂ.16/ಎ ಅಸ್ತಿತ್ವದಲ್ಲಿ ಇಲ್ಲ , ಆದರೆ ಅದು ಕಾಲ್ಪನಿಕ ನಿವೇಶನ ಇರುತ್ತದೆ ಅನ್ನುವುದು ಸರಿಯಲ್ಲ.

ವಾದಿ ಸಣ್ಣಮ್ಮನಿಗೆ ಸೇರಿದ ಜಾಗವನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಾನು , 1 ಮತ್ತು 8ನೇ ಪ್ರತಿವಾದಿ ಎಲ್ಲಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾನು , 1 ಮತ್ತು 8ನೇ ಪ್ರತಿವಾದಿ ಜೊತೆ ಸೇರಿ ನಿಡಿ-44 ರಿಂದ ನಿಡಿ-47 ನ್ನು ಸೃಷ್ಟನೆ ಮಾಡಿ ಹಾಜರುಮಾಡಿರುತ್ತೇನೆ ಅನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

Sd/-

ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ), ಮೈಸೂರು.